ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 31.07.2024.

**ಮುಖ್ಯ ವಿಚಾರಣೆ – ಪ್ರತಿವಾದಿ ಪರಃ ಶ್ರೀ. ಪಿ ಆರ್ ಮಠದ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

ದಾವೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮೂಲ ಹಕ್ಕು ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ-01 ಎಂದು, ಕರಾರು ಪತ್ರ ಹಾಜರುಪಡಿಸಿದ್ದು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-02 ಎಂದು, ಒಟ್ಟು ಮುಕ್ತಿಯಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-03 ಎಂದು, ಆಸ್ತಿ ತೆರಿಗೆ ವಿವರ ಪಟ್ಟಿ ಹಾಜರುಪಡಿಸಿದ್ದು ಅದನ್ನು ನಿಡಿ-04 ಎಂದು, ತೆರಿಗೆ ಪಾವತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-05 ರಿಂದ ನಿಡಿ-20 ಎಂದು, ಆಸ್ತಿ ತೆರಿಗೆ ಪಟ್ಟಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-21 ರಿಂದ ನಿಡಿ-35 ಎಂದು, ವಿದ್ಯುತ್ ಬಿಲ್ ನ ರಶೀದಿಗಳನ್ನು ಹಾಜರುಪಡಿಸಿದ್ದು ನಿಡಿ-36 ರಿಂದ ನಿಡಿ-40 ಎಂದು, ದೃಢೀಕರಣ ಪತ್ರ ನಿಡಿ-41 ಎಂದು, ತೆರಿಗೆ ರಶೀದಿ ನಿಡಿ-42 ಎಂದು, ತೆರಿಗೆ ಲೆಕ್ಕಾಚಾರ ನಿಡಿ-43 ಎಂದು, ಜಮಾ ಖರ್ಚಿನ ಖಾತೆ ಹಾಜರುಪಡಿಸಿದ್ದು ಅದನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-44 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ವಾದಿಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಆದೇಶಿಸಿ ಪಾಟೀ ಸವಾಲು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.